# ರಾಮ ರಾಮ ರಾಮ ಸೀತಾ ರಾಮ ಎನ್ನಿರೋ ಇಂದ್ರಿಯಂ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics given without highlights are as per Ref. 2. Lyrics given in yellow highlights are as per Ref. 1. The wordings in Ref. 3 are slightly different and are given in green highlights.
5. **Note:** Singer has followed the wordings as in Ref. 1 (given in yellow highlights).

ರಾಗ ಜಂಜೂಟಿ ರೂಪಕತಾಳ

| | |
|---|---|
| ರಾಮ ರಾಮ ರಾಮ | ರಾಮ ರಾಮ ರಾಮ |
| ಸೀತಾರಾಮ ಎನ್ನಿರೋ ‖ ಪ ‖ | ಸೀತಾರಾಮ ಎನ್ನಿರೋ ‖ ಪ ‖ |
| | |
| ಅಮರಪತಿಯ ದಿವ್ಯ ನಾಮ | ನೇಮದಿಂದ ಭಜಿಸುದವರ |
| ಅಂದು ಒದಗದೊ ‖ ಅಪ ‖ | ಕಾಮಿತಗಳ ಕೊಡುವ ನಾಮ ‖ ಅಪ ‖ |
| | |
| ಭರದಿ ಯಮನ ಭಟರು ಬಂದು | ಭರದಿ ಯಮನ ಭಟರು ಬಂದು |
| ಹೊರಡುಯೆಂದು ಮೆಟ್ಟಿ ಮುರಿಯೆ | ಹೊರಡುಯೆಂದು ಮೆಟ್ಟಿ ತುಳಿದು |
| ಕೊರಳಿಗಾತ್ಮ ಸೇರಿದಾಗ | ಕೊರಳಿಗಾತ್ಮ ಸೇರಿದಾಗ |
| ಹರಿಯ ನಾಮ ಒದಗದೊ ‖ 1 ‖ | ಹರಿಯ ಧ್ಯಾನ ಬಾರದಯ್ಯಾ ‖ 1 ‖ |
| | |
| ಇಂದ್ರಿಯಂಗಳೆಲ್ಲ ಕೂಡಿ | ಇಂದ್ರಿಯಂಗಳೆಲ್ಲ ಕೂಡಿ ಬಂದು |
| ಬಂದು ತನುವ ಮುಸುಕುವಾಗ | ತನುವ ಮುಸಿಕಿದಾಗ |
| ಸಿಂಧು ಸುತೆಯ ಪತಿಯ ನಾಮ | ಸಿಂಧು ಸುತೆಯ ಪತಿಯ ನಾಮ |
| ಅಂದಿಗೊದಗಿ ಬಾರದೊ ‖ 2 ‖ | ಅಂದಿಗೊದಗಲರಿಯದಯ್ಯ ‖ 2 ‖ |

| | |
|---|---|
| ಶ್ವಾಸಖಾಸವೆರಡು ಕಂಠ | ಶ್ವಾಸಖಾಸವೆರಡು ಕಂಠ |
| ದೇಹದಲ್ಲಿ ಸೇರಿದಾಗ | ವಾಸವಾಗಿ ಸಿಲುಕಿದಾಗ |
| ವಾಸುದೇವನೆಂಬ ನಾಮ | ವಾಸುದೇವ ಕೃಷ್ಣನ ನಾಮ |
| ಆ ಸಮಯಕ್ಕೊದಗದೊ ‖ 3 ‖ | ಆ ಸಮಯಕ್ಕೊದಗದಯ್ಯ ‖ 3 ‖ |
| | |
| ಶೃಂಗಾರದ ದೇಹವೆಲ್ಲ | ಶೃಂಗಾರದ ದೇಹವೆಲ್ಲ |
| ಅಂಗ ಮುರಿದು ಬೀಳುವಾಗ | ಅಂಗ ಬಡಿದು ಮುರಿದು ಬಿದ್ದು |
| ಕಂಗಳಿಗಾತ್ಮ ಸೇರಿದಾಗ | ಕಂಗಳಿಗಾತ್ಮ ಸೇರಿದಾಗ |
| ರಂಗನ ಧ್ಯಾನ ಒದಗದೊ ‖ 4 ‖ | ಶ್ರೀರಂಗ ನಾಮ ಒದಗದಯ್ಯಾ ‖ 4 ‖ |
| | |
| ವಾತ ಪಿತ್ತವೆರಡು ಕೂಡಿ | ವಾತ ಪಿತ್ತವೆರಡು ಕೂಡಿ |
| ಈ ತನುವನಾವರಿಸಿ | ಶ್ಲೇಷ್ಮ ಬಂದು ಒದಗಿದಾಗ |
| ಧಾತು ಕುಂದಿದಾಗ ರಘು- | ಧಾತುಗುಂದಿದಾಗ ರಘು- |
| ನಾಥನ ಧ್ಯಾನ ಒದಗದೊ ‖ 5 ‖ | ನಾಥ ಧ್ಯಾನ ಒದಗದೊ ‖ 5 ‖ |
| | |
| ಕಲ್ಲು ಮರನಾಗಿ ಜ್ಞಾನ | ಕಲ್ಲಿನಂತೆ ಇರುವ ಜೀವ |
| ವಿಲ್ಲದಾಗ ಮರಣ ಒದಗೆ | ನಿಲ್ಲದಂತೆ ಮರಣ ವೇಳೆ |
| ಫುಲ್ಲನಾಭ ಕೃಷ್ಣನೆಂಬ | ಫುಲ್ಲನಾಭ ಕೃಷ್ಣನೆಂಬೋ |
| ಸೊಲ್ಲು ಬಾಯಿಗೊದಗದೊ ‖ 6 ‖ | ಸೊಲ್ಲು ಬಾಯಿಗೊದಗದಯ್ಯ ‖ 6 ‖ |
| | |
| ಕೆಟ್ಟ ಜನ್ಮದಲ್ಲಿ ಹುಟ್ಟಿ | ಇಹದಲ್ಲಿ ಇಷ್ಟವುಂಟು |
| ದುಷ್ಟಕರ್ಮ ಮಾಡಿ ದೇಹ | ಪರದಲ್ಲಿ ಸುಖವುಂಟು |
| ಬಿಟ್ಟು ಹೋಗುವಾಗ ಪುರಂದರ | ವರ ಪುರಂದರ ವಿಠ್ಠಲನ |
| ವಿಠಲನ ಧ್ಯಾನ ಒದಗದೊ ‖ 7 ‖ | ಸ್ಮರಣೆ ಬಾಯ್ಗೆ ಒದಗದೊ ‖ 7 ‖ |

**Note:** The below mentioned lyrics are as per the book in Ref. 3 above.

ರಾಗ ಕಲ್ಯಾಣಿ ತಾಳ ಆದಿ

ರಾಮ ರಾಮ ರಾಮ ಸೀತಾರಾಮ ಎನ್ನಿರೋ || ಪ ||

ಇಂದ್ರಿಯಂಗಳೆಲ್ಲ ಕೂಡಿ ಬಂದು
ತನುವ ಮುಸುಕಲು
ಸಿಂಧು ಸುತೆಯ ಪತಿಯ ಧ್ಯಾನ
ಎಂದಿಗಲ್ಲಿ ದೊರೆಯದೊ || 1 ||

ಭರದಿ ಯಮನ ಭಟರಾಗಲೆ
ಹೊರಡುಯೆಂದು ಮೆಟ್ಟಿ ತುಳಿಯೆ
ಕೊರಳಿಗಾತ್ಮ ಸೇರಿದಾಗ
ಹರಿಯ ಧ್ಯಾನ ದೊರೆಯದೊ || 2 ||

ದೋಷ ಕ್ಲೇಶ ದುಃಖವೆಂಬ
ಶ್ಲೇಷ್ಮದಲ್ಲಿ ಸಿಕ್ಕಿ ಇರಲು
ವಾಸುದೇವ ಕೃಷ್ಣನೆಂಬು-
ದಾಸಮಯಕ್ಕೆ ದೊರೆಯದೊ || 3 ||

ಸಿಂಗಾರವಾದ ದೇಹವೆಲ್ಲ
ಅಂಗವಳಿದು ಮುರಿದು ಬೀಳೆ
ಅಂಗಳಿಗಾತ್ಮ ಸೇರಿದಾಗ
ರಂಗನ ಧ್ಯಾನವು ದೊರೆಯದೊ || 4 ||

ಕೆಟ್ಟ ಕೆಟ್ಟರಲ್ಲೊ ಬರಿದೆ
ಕಟ್ಟಕಡೆಯಲ್ಲಿ ಕಾಯ
ಬಿಟ್ಟು ಹೋಗುವಾಗ ಪುರಂದರ
ವಿಠ್ಠಲ ಧ್ಯಾನ ದೊರೆಯದೊ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕೊರಳಿಗಾತ್ಮ ಸೇರಿದಾಗ** – ‘ಕಂಠಗತಪ್ರಾಣ’ವೆಂಬ ಸಂಸ್ಕೃತಮಾತಿನ ಛಾಯೆ.

**ಸಿಂಧುಸುತೆ** – ಲಕ್ಷ್ಮಿ.

**ಶ್ವಾಸಖಾಸ** – ವಾತಕಫಗಳೆಂಬ ಎರಡು ದೋಷಗಳು ಕುತ್ತಿಗೆಯಲ್ಲಿ ಕವಿಯಲು ಅದು ಪ್ರಾಣೋತ್ಕ್ರಮಣಸ್ಥಿತಿಯೆಂದು ಎಣಿಕೆ. ('ಕಫ ವಾತ ಪಿತ್ತೈಃ ಕಂಠಾವರೋಧನ ವಿಧೌ ಸ್ಮರಣಂ ಕುತಸ್ತೆ?' ಎಂದು ಕುಲಶೇಖರರ ಮುಕುಂದ ಮಾಲಾ ಸ್ತೋತ್ರದಲ್ಲಿ ಬರುವುದು.)

**Classification:** Keerthane
**Ankita:** purandara vittala
**Location:** NA
**Category:** Vidhi Chintane
**Group Words:** rama, sita, deha, Dhyana, pati, yama, atma, Krishna, ranga, smarane, sukha, kallu, vidhi,
**Pravachana:** NA
**Explanation:** NA